ಯಾವುದೇ ವ್ಯವಸ್ಥೆ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತದೆಯಷ್ಟೆ. ಸಾಮಾಜಿಕ ಬದಲಾವಣೆಗಳಿಂದ ಪ್ರಭಾವಿತವಾಗಿ ಹೊಸ ರೂಪ ತಳೆಯುತ್ತದೆ. ಅದರ ಜೊತೆಗೇ ಹೊಸ ಒತ್ತಡಗಳನ್ನೂ ಸೃಷ್ಟಿಸುತ್ತದೆ. ನಮ್ಮ ಅಪ್ಪ–– ಅಮ್ಮ ಮೈಲುಗಟ್ಟಲೆ ನಡೆದು ಶಾಲೆಗೆ ಹೋಗುತ್ತಿದ್ದರು. ಇಂದು ನಮ್ಮ ಮಕ್ಕಳು ಬಸ್ಸಿನಲ್ಲಿ ಕನಿಷ್ಠ ಅರ್ಧ ಗಂಟೆಯಿಂದ ಒಂದು ಗಂಟೆ ಶಾಲೆಗೆ ಪಯಣಿಸಬೇಕಾಗುತ್ತದೆ. ಹಿಂದೆ ಇದ್ದ ಎಲ್ಲರಿಗೂ ವಿದ್ಯೆ ಕಲಿಯುವ ಅವಕಾಶ ಅಪರೂಪ ಎನ್ನುವ ಪರಿಸ್ಥಿತಿ ಇವತ್ತು ಇಲ್ಲ. ಹಾಗೆಂದು ಮಕ್ಕಳ ಮೇಲೆ ಒತ್ತಡಗಳೇನೂ ಕಡಿಮೆಯಾಗಿಲ್ಲ. ಬದಲಾಗಿ ಅವು ಹೆಚ್ಚುತ್ತಲೇ ಇವೆ.

## ಶಾಲೆ ಏಕೆ ಇಷ್ಟವಿಲ್ಲ?

"ನನ್ನ 3 ವರ್ಷದ ಮಗಳು ತನ್ನ ಅಕ್ಕ ಶಾಲೆಗೆ ಹೋಗುವುದನ್ನು ನೋಡಿ ತಾನೂ ಶಾಲೆಗೆ ಹೋಗುತ್ತೇನೆ ಎಂದು ಹಠ ಮಾಡುತ್ತಿದ್ದಳು. ನಾವಂದುಕೊಂಡೆವು– ಶಾಲೆಗೆ ಹೋಗುವಾಗ ಇವಳು ಆರಾಮಾಗಿ ಹೋಗ್ತಾಳೆ, ನಮಗೆ ಏನೂ ತಲೆನೋವಿಲ್ಲ ಅಂತ. ಆದರೆ ಆಗಿದ್ದೇ ಇನ್ನೊಂದು! ಒಂದು ದಿನ ಹೋದಳು, ಅತ್ತಳು, ಆ ಮೇಲೆ ಅವಳು ಹೇಳಿದ್ದು– 'ದಿನಾ ಏಕೆ ಶಾಲೆಗೆ ಹೋಗ್ಬೇಕು? ನಾನಂದುಕೊಂಡಿದ್ದು ಒಂದೇ ದಿನ ಸ್ಕೂಲಿಗೆ ಹೋಗಿ ಬಂದ್ರಾಯ್ತು ಅಂತ!' ಈ ಮಗುವಿಗೆ ಶಾಳೆಯ ಮಹತ್ವವನ್ನು ಅರ್ಥ ಮಾಡಿಸುವುದು ಹೇಗೆ''

–ಇದು ಹಲವು ಅಮ್ಮಂದಿರ ಪ್ರಶ್ನೆ. ನರ್ಸರಿ ಶಾಲೆಗಳಂತಹ ಕೇವಲ ಆಟ, –ಹಾಡು, –ಕಥೆಗಳನ್ನೇ ಮಾಡಿಸುವ ತರಗತಿಗಳಿಗೂ ಸಾಮಾನ್ಯವಾಗಿ ಮಕ್ಕಳು ಇಷ್ಟಪಟ್ಟು ಹೋಗುವುದಿಲ್ಲ.

ಎಷ್ಟೋ ಬಾರಿ ಪೋಷಕರು– ಶಾಲೆಯೆಂದರೆ ತಮಗೆ ಮಕ್ಕಳನ್ನು



ಮನೆಯಲ್ಲಿ ನಿಭಾಯಿಸುವ ಕಷ್ಟ ಇಲ್ಲವಾಗಿಸುವ ಯತ್ನ– ಎಂದಷ್ಟೇ ತಿಳಿದುಕೊಂಡಿರುತ್ತಾರೆ. ನಿಜವಾಗಿ ಶಾಲೆಯಿಂದ ಉಪಯೋಗವಿದೆಯೇ, ಮಕ್ಕಳಿಗೆ ಅದು ಸಂತಸ ತರುತ್ತದೆಯೇ ಎಂಬ ಬಗ್ಗೆ ಗಮನಿಸುವುದಿಲ್ಲ. ಮುಂದೆ ಸಿಗಬಹುದಾದ 'ಉದ್ಯೋಗ' ವೊಂದೇ ನಮ್ಮೆಲ್ಲರ ಶಾಲೆಯ ಗುರಿ!


